# ಕೊಹ್ಲಿಯ ಕಿರಿಕ್?

ಭಾರತೀಯ ಕ್ರಿಕೆಟ್ ತಂಡದ ಮುಖ್ಯ ಕೋಚ್ ಅನಿಲ್ ಕುಂಬ್ಳೆ ಪದತ್ಯಾಗ ಮಾಡಲು ನಾಯಕ ವಿರಾಟ್ ಕೊಹ್ಲಿ ಕಾರಣರೆ? ಕುಂಬ್ಳೆ ಅವರ ಶಿಸ್ತು ಮತ್ತು ಕಠಿಣ ನಿಯಮ ಪಾಲನೆಯನ್ನು ಒಪ್ಪಲಾಗದೆ ಕೊಹ್ಲಿ ಕೋಚ್ ಜೊತೆಗೆ ಮಾತು ಬಿಟ್ಟದ್ದೆ? ಕಳೆದ ಮೂರು ತಿಂಗಳಿಂದ ಇಬ್ಬರು ನಡುವೆಯೂ ಸರಿಯಾದ ಮಾತುಕತೆ ಇರಲಿಲ್ಲ ಎನ್ನುವುದು ನಿಜವೆ? ಆರ್‌ಸಿಬಿ ತಂಡದ ನಾಯಕರಾಗಿ ಬೆಂಗಳೂರಿಗರೇ ಆಗಿರುವ ಕೊಹ್ಲಿ, ಹೀಗೆ ಇನ್ನೊಬ್ಬ ಕನ್ನಡಿಗನ ಜತೆಗೆ ವರ್ತಿಸಿದ್ದು ಸರಿಯೆ? ಇಬ್ಬರ ನಡುವಣ ಮುನಿಸಿಗೆ ಕೊಹ್ಲಿ ಉದ್ಧಟತನವೇ ಕಾರಣವೆ? ಭಾರತ ತಂಡದ ನಾಯಕನಾದ ಬಳಿಕ, ಒಂದರ ಹಿಂದೆ ಒಂದರಂತೆ ದಾಖಲೆಗಳನ್ನು ಅಳಿಸುತ್ತಾ ಸಾಗಿರುವ ವಿರಾಟ್ ಕೊಹ್ಲಿ ಅವರಿಗೆ ಇತ್ತೀಚೆಗೆ ಅಹಂ ಹೆಚ್ಚಾಗಿದೆಯೆ?

–ಪ್ರಶ್ನೆಗಳನ್ನು ಕೇಳುತ್ತಾ ಹೋದರೆ, ಪಟ್ಟಿ ಇನ್ನಷ್ಟು ಉದ್ದವಾಗುತ್ತದೆ. ಕುಂಬ್ಳೆ ಅಭಿಮಾನಿಗಳು ಮಾತ್ರವಲ್ಲ, ಕ್ರಿಕೆಟ್ ಅಭಿಮಾನಿಗಳೂ ಕೇಳುತ್ತಿರುವ ಪ್ರಶ್ನೆಯಿದು. ಕೆಲವರಿಗೆ ಇದು 'ಉತ್ತರ ಭಾರತದವರು ದಕ್ಷಿಣದವರ ವಿರುದ್ಧ ನಡೆಸಿದ ಪಿತೂರಿ'ಯಂತೆಯೂ ಕಂಡಿದೆ.

ಎಲ್ಲವೂ ಸರಿಯಿದ್ದಿದ್ದರೆ ಬಹುಶಃ ಕೋಚ್ ಕುಂಬ್ಳೆ ಇನ್ನೊಂದು ವರ್ಷಕ್ಕೆ ಮುಂದುವರಿಯುತ್ತಿದ್ದರೇನೋ? ಆದರೆ ಅದಾಗಲಿಲ್ಲ. ಹೊಸ ಕೋಚ್ ನೇಮಕಕ್ಕೆ ಅರ್ಜಿ ಸಲ್ಲಿಸಲು ಜುಲೈ 9ರವರೆಗೆ ಸಮಯವಿದೆ. ವೀರೇಂದ್ರ ಸೆಹ್ವಾಗ್, ದೊಡ್ಡಗಣೇಶ್, ರಿಚರ್ಡ್ ಪೈಬಸ್, ಲಾಲ್‌ಚಂದ್ ರಜಪೂತ್, ಟಾಮ್ ಮೂಡಿ ಮತ್ತು ರವಿ ಶಾಸ್ತ್ರಿ ಈ ಹುದ್ದೆಗೆ ಅರ್ಜಿ ಸಲ್ಲಿಸಿದ್ದಾರೆ. ಭಾರತ ತಂಡದ ಶ್ರೀಲಂಕಾ ಪ್ರವಾಸಕ್ಕೆ ಮುನ್ನ ಹೊಸ ಕೋಚ್ ನೇಮಕ ಆಗಲಿದೆ.

ವಿರಾಟ್ ಕೊಹ್ಲಿಗೆ ತುಂಬ 'ಕ್ಲೋಸ್' ಆಗಿರುವ ರವಿ ಶಾಸ್ತ್ರಿ ಅವರೇ ಹೆಡ್ ಕೋಚ್ ಆಗಿ ಬರಬಹುದು ಎನ್ನುವ ಸುದ್ದಿ ದಟ್ಟವಾಗಿದೆ. ಕುಂಬ್ಳೆ ಅವರಿಗಿಂತ ಮುಂಚೆಯೂ ರವಿ ಶಾಸ್ತ್ರಿ ಡೈರೆಕ್ಟರ್ ಆಗಿದ್ದರು. ಒಂದು ಕಾಲದಲ್ಲಿ ಭಾರತ ತಂಡದ ಕ್ಯಾಪ್ಟನ್ ಆಗಿದ್ದ, 2014ರಿಂದ 16ರವರೆಗೆ ಭಾರತ ತಂಡದ 'ಡೈರೆಕ್ಟರ್' ಕೂಡಾ ಆಗಿದ್ದ ರವಿ ಶಾಸ್ತ್ರಿ, ಕೋಚ್ ಆಗಿ ಬಂದರೆ ವಿರಾಟ್ ಕೊಹ್ಲಿ ಇನ್ನಷ್ಟು ಬಲಶಾಲಿ ಆಗುವುದು ಖಚಿತ.



ಹಾಗೆ ನೋಡಿದರೆ ಕಳೆದ ವರ್ಷವೂ ರವಿ ಶಾಸ್ತ್ರಿ ಕೋಚ್ ಹುದ್ದೆಗೆ ಅರ್ಜಿ ಹಾಕಿದ್ದರು. ಆದರೆ ಸಚಿನ್, ಗಂಗೂಲಿ ಮತ್ತು ವಿವಿಎಸ್ ಲಕ್ಷ್ಮಣ್‌ರಿದ್ದ ಸಲಹಾ ಸಮಿತಿ ಶಾಸ್ತ್ರಿಯನ್ನು ತಿರಸ್ಕರಿಸಿ, ಅನಿಲ್ ಕುಂಬ್ಳೆಯವರನ್ನು ಕೋಚ್ ಆಗಿ ಆಯ್ಕೆ ಮಾಡಿತ್ತು. ಕೋಚ್ ಆಯ್ಕೆ ವೇಳೆ ಗಂಗೂಲಿ ಮತ್ತು ಶಾಸ್ತ್ರಿ ಮಧ್ಯೆ ಮಾತಿನ ಚಕಮಕಿಯೂ ನಡೆದಿತ್ತು.

'ಕುಂಬ್ಳೆ ಮತ್ತು ಕೊಹ್ಲಿ ನಡುವಣ ಮುನಿಸನ್ನು ಬಗೆಹರಿಸಿ' ಎಂದು ಬಿಸಿಸಿಐ ಸೂಚಿಸಿತ್ತು. ಕುಂಬ್ಳೆ ಜತೆಗೆ ತ್ರಿಮೂರ್ತಿಗಳು ಮಾತನಾಡಿದ್ದರು. ಆದರೆ ಕೊಹ್ಲಿ ಜತೆ ಚರ್ಚಿಸಿದ ಬಳಿಕ 'ಈ ಮುನಿಸು ಸರಿಹೋಗುವುದಿಲ್ಲ' ಎಂದು ಅನ್ನಿಸಿ, ಹಾಗೆಂದೇ ಬಿಸಿಸಿಐ ಗೆ ವರದಿ ನೀಡಿದ್ದರು.

ಟೆಸ್ಟ್, ಏಕದಿನ ಮತ್ತು ಟ್ವೆಂಟಿ20 ಎಲ್ಲ ತಂಡಗಳಿಗೂ ನಾಯಕನಾಗಿರುವ ಕೊಹ್ಲಿಗೆ ಇತ್ತೀಚೆಗೆ ಅಹಂ ಜಾಸ್ತಿ ಆಗಿರುವುದು ನಿಜವೇ? ಗೊತ್ತಿಲ್ಲ, ಆದರೆ ಅವರು ಹೆಚ್ಚು ಪ್ರಬುದ್ಧ ಹಾಗೂ 'ಜಾಣ'ರಾಗಿರುವುದಂತೂ ನಿಜ. ಕುಂಬ್ಳೆ ರಾಜೀನಾಮೆ ಪ್ರಕಟವಾದ ಬಳಿಕ ಪತ್ರಕರ್ತರ ಪ್ರಶ್ನೆಗಳಿಗೆ ನೀಡಿದ ಉತ್ತರವೇ ಇದಕ್ಕೆ ಸಾಕ್ಷಿ. 'ವೈಯಕ್ತಿಕವಾಗಿ ಯಾರ ಬಗ್ಗೆಯೂ ಏನೂ ಹೇಳಲಾರೆ. ತಂಡದ ಅಭಿಪ್ರಾಯವನ್ನಷ್ಟೇ, ಅದೂ ಬಿಸಿಸಿಐ ಕೇಳಿದಾಗ ಹೇಳುತ್ತೇನೆ. ಸದ್ಯಕ್ಕೆ ವೆಸ್ಟ್ ಇಂಡೀಸ್‌ನಲ್ಲಿ ಸರಣಿ ಗೆಲ್ಲುವುದಕ್ಕೆ ನಮ್ಮ ಆದ್ಯತೆ...'– ಇದು ಕೊಹ್ಲಿ ಮಾತು.

'ಬಹಳ ಕೂಲ್ ಆಗಿ ಉತ್ತರಿಸುತ್ತಿದ್ದೀರಲ್ಲ...? ಇತ್ತೀಚೆಗೆ ನೀವು ತುಂಬ ಪ್ರಬುದ್ಧರಾದಂತೆ ಕಾಣಿಸುತ್ತಿದೆಯಲ್ಲ..?' ಎಂದು ಪತ್ರಕರ್ತರು ಕೆಣಕಿದಾಗ, 'ಸಮಯ ಹೋದ ಹಾಗೆ ಎಲ್ಲವೂ ಅಭ್ಯಾಸ ಆಗುತ್ತೆ. ದಿನದ ಕೊನೆಗೆ ನೀವು ಮೈದಾನದಲ್ಲಿ ಏನು ಮಾಡಿದಿರಿ ಎನ್ನುವುದಷ್ಟೇ ಮುಖ್ಯ. ಮೀಡಿಯ ನಿಮ್ಮ ಬಗ್ಗೆ ಬರೆದಿದೆಯೆ ಅನ್ನುವುದು ಮುಖ್ಯವಲ್ಲ' ಎಂದಿದ್ದಾರೆ ಕೊಹ್ಲಿ! ಜತೆಗೆ 'ನನ್ನ ಮೇಲೆ ಹೆಚ್ಚು ಫೋಕಸ್ ಇದೆ. ಯಾವುದೂ ನನ್ನ ನಿಯಂತ್ರಣದಲ್ಲಿ ಇಲ್ಲ. ನಾನು ಕೇಳಿದ್ದೂ ಅಲ್ಲ. ಅದು ನಡೆದಿದೆ. ನನ್ನ ಸಾಮರ್ಥ್ಯದ ಕಡೆಗೆ ಗಮನ ಹರಿಸುವೆ' ಎಂದೂ ಮಾತು ಸೇರಿಸಿದ್ದಾರೆ. 'ಜಾಣ' ಅಲ್ಲದೆ ಇನ್ನೇನನ್ನಬಹುದು?

ಕೊಹ್ಲಿ ಆಟದ ಸಾಮರ್ಥ್ಯದ ಬಗ್ಗೆ ಎರಡು ಮಾತೇ ಇಲ್ಲ. ಕಠಿಣ ಪರಿಶ್ರಮದಿಂದ ಒಂದೊಂದೇ ಮೆಟ್ಟಿಲು ಹತ್ತಿ ಈ ಹಂತಕ್ಕೆ ಬಂದಾತ ಕೊಹ್ಲಿ. ದೆಹಲಿಯ ವಿಕಾಸ್‌ಪುರಿಯ ಶಂಕರ್ ಗಾರ್ಡನ್‌ನಲ್ಲಿ ಚಿಕ್ಕಂದಿನಿಂದ ಕೊಹ್ಲಿಯನ್ನು ನೋಡಿದವರು ಅಪ್ಪ ಸತ್ತ ನಂತರ ಆತನ ವ್ಯಕ್ತಿತ್ವದಲ್ಲಾದ ಬದಲಾವಣೆಗಳನ್ನು ಬೊಟ್ಟು ಮಾಡುತ್ತಾರೆ. 19ರ ಕೆಳಗಿನವರ ತಂಡದ ನಾಯಕನಾಗಿದ್ದಾಗ ಭಾರತಕ್ಕೆ ವಿಶ್ವಕಪ್ ತಂದುಕೊಟ್ಟ ಕೊಹ್ಲಿ, 2011ರಲ್ಲಿ ಏಕದಿನ ವಿಶ್ವಕಪ್ ಗೆದ್ದ ಭಾರತ ತಂಡದಲ್ಲಿದ್ದ. ಟ್ವೆಂಟಿ20, ಒಂದು ದಿನದ ಪಂದ್ಯ ಮತ್ತು ಟೆಸ್ಟ್‌ಗಳಲ್ಲೂ ಕೊಹ್ಲಿ ಇತ್ತೀಚೆಗೆ ಮಾಡಿರುವ ದಾಖಲೆಗಳನ್ನು ಇನ್ನೊಬ್ಬ ಆಟಗಾರ ಮುರಿಯುವುದು ಬಲುಕಷ್ಟ. 2013ರಲ್ಲಿ ಏಕದಿನ ಪಂದ್ಯಗಳ ಐಸಿಸಿ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಪಡೆದಿರುವ ಕೊಹ್ಲಿ, 2014ರಿಂದ ಟ್ವೆಂಟಿ20, ಏಕದಿನ ಐಸಿಸಿ ರ‍್ಯಾಂಕಿಂಗ್‌ನಲ್ಲೂ 'ನಂಬರ್ ಒನ್!' ಅದಕ್ಕೆಂದೇ ಜಾಹೀರಾತು ಮಾರ್ಕೆಟ್‌ನಲ್ಲೂ ಶಾರೂಕ್ ಖಾನ್ ಬಿಟ್ಟರೆ ಅತ್ಯಧಿಕ ಬ್ರ್ಯಾಂಡ್ ವ್ಯಾಲ್ಯೂ (92 ದಶಲಕ್ಷ ಅಮೆರಿಕನ್ ಡಾಲರ್) ಹೊಂದಿರುವ ಏಕೈಕ ಆಟಗಾರ! ■

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65